ಕೈಗಾರಿಕೆಗಳು ಈಗ ಮುಚ್ಚಿವೆ. ಸರ್ಕಾರ ಅವರ ರೀಹಾಬಿಲಿಟೇಷನ್ ಸಲುವಾಗಿ ಪ್ರಯತ್ನ ಮಾಡುತ್ತಿದೆ. ಅವರಿಗೆ ಬೆಟರ್‌ಮೆಂಟ್ ಲೆವಿ ಕೊಡುವುದು ಬಂದ್ ಆಗಿದೆ. ಆ ಕೈಗಾರಿಕೆಗಳ ಪರಿಸ್ಥಿತಿ ಸುಧಾರಿಸಿದ ನಂತರ ನಾವು ಆ ಬೆಟರ್‌ಮೆಂಟ್ ಲೆವಿ ಕೊಡಬೇಕೆಂದು ಅವರಿಗೆ ಹೇಳುತ್ತೇವೆ.

ಮಂತ್ರಿಗಳ ಹೇಳಿಕೆ :

ವಿಷಯ :- ಬೇತಮಂಗಲ ಜ್ಞಾನಜ್ಯೋತಿ ಎಂಬ ಕಿವುಡು ಮೂಗ ಮತ್ತು ಬುದ್ಧಿ ಮಂದ್ಯ ಮಕ್ಕಳ ಶಾಲೆ ಕುರಿತು.

+ **ಶ್ರೀಮತಿ ಬಿ. ಟಿ. ಲಲಿತಾ ನಾಯಕ್** (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆಯರು) :- ಮಾನ್ಯ ಉಪಾಧ್ಯಕ್ಷರೇ, ಕೋಲಾರ ಜಿಲ್ಲೆಯ ಬಂಗಾರು ಪೇಟೆ ತಾಲ್ಲೂಕು ಬೇತಮಂಗಲ ಎಂಬ ಸ್ಥಳದಲ್ಲಿ ಜ್ಞಾನಜ್ಯೋತಿ ಎಂಬ ಕಿವುಡ, ಮೂಗ ಮತ್ತು ಬುದ್ಧಿ ಮಾಂದ್ಯದ ವಿಶೇಷ ಶಾಲೆ ಎಂದು ಖಾಸಗಿ ಆಡಳಿತದಲ್ಲಿ ನಡೆಯುತ್ತಿದೆ. ಜ್ಞಾನಜ್ಯೋತಿ ವಿದ್ಯಾ ಸಂಸ್ಥೆಯು ನಮ್ಮ ಇಲಾಖೆಯಿಂದ ಪರವಾನಗಿ ಪಡೆಯದೆ ಶಾಲೆಯನ್ನು ನಡೆಸುತ್ತಿರುವುದಲ್ಲದೆ ಆ ಸಂಸ್ಥೆಗೆ ಅಂಗವಿಕಲರ ಕಲ್ಯಾಣ ಇಲಾಖೆಯಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಈ ಸಂಸ್ಥೆಯು ಸೊಸೈಟಿ ಆಕ್ಟ್‌ನ ಪ್ರಕಾರ ರಿಜಿಸ್ಟರ್ ಆಗಿರುತ್ತದೆ.

ಜ್ಞಾನ ಜ್ಯೋತಿ ವಿದ್ಯಾ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದ, ಚಂದ್ರ ಮತ್ತು ಇತರರು, ಶಾಲೆಯಿಂದ ತಪ್ಪಿಸಕೊಂಡು ಕೋಲಾರಕ್ಕೆ ಹೋಗಿರುವುದು ನಿಜ ಇರುತ್ತದೆ. ಕೋಲಾರದ ಪೋಲೀಸ್ ಅಧಿಕಾರಿಗಳು ಈ ಮಕ್ಕಳನ್ನು ಬೇತಮಂಗಲ ಪೋಲೀಸ್ ಅಧಿಕಾರಿಗಳಿಗೆ ಒಪ್ಪಿಸಿದ್ದು ಕೂಡ ನಿಜ ಇರುತ್ತದೆ. ಈ ನಾಲ್ಕು ಮಕ್ಕಳಲ್ಲಿ ಚಂದ್ರ ಎಂಬುವನು ತಂಬಾ ತುಂಟ ಸ್ವಭಾವದನಾಗಿದ್ದು ಅವನ ತರಗತಿಯ ಅಧ್ಯಾಪಕಿಯಾದ ಶ್ರೀಮತಿ ಜ್ಞಾನಮ್ಮ ಇವರು ತರಗತಿಯನ್ನು ನಡೆಸುತ್ತಿರುವ ಸಮಯದಲ್ಲಿ ಪಾಠಪ್ರವಚನಗಳಿಗೆ ಅಡಚಣೆಯನ್ನು ಉಂಟು ಮಾಡಿದ ಕಾರಣ ಆ ಶಿಕ್ಷಕಿ ಚಂದ್ರ ವಿದ್ಯಾರ್ಥಿಗೆ ಶಿಸ್ತು ಕಾಪಾಡುವಂತೆ ಸ್ವಲ್ಪ ಕಹಿ ಮಾತಿನಲ್ಲಿ ತಿಳುವಳಿಕೆ ನೀಡಿದರು. ಚಂದ್ರ ಹಾಗೂ ಇತರ ಮೂರು ಮಕ್ಕಳು ಆ ಶಿಕ್ಷಕಿಯನ್ನು ಹೊಡೆಯಲು ಹೋದರು. ಈ ವಿಷಯ ಅಧೀಕ್ಷಕರಾದ ಶ್ರೀಮತಿ ಶಶಿಕಲಾ ಎಂಬುವವರ ಗಮನಕ್ಕೆ ಹೋಯಿತು. ಆ ನಾಲ್ಕು ಜನ ಮಕ್ಕಳಿಗೆ ಶಾಲೆಯಲ್ಲಿ ಶಿಸ್ತಿನಿಂದ ವರ್ತಿಸಲು ಮತ್ತು ಶಿಕ್ಷಕರ ಬಗ್ಗೆ ಗೌರವಭಾವನೆ ಹೊಂದುವಂತೆ ತಿಳುವಳಿಕೆ ನೀಡಿದ್ದಲ್ಲದೆ ದೈಹಿಕವಾಗಿ ಲಘುಶಿಕ್ಷೆ ನೀಡಿದರೆಂದು ವರದಿಯಾಗಿದೆ. ಈ ಕ್ರಮ ಶಾಲೆಯಲ್ಲಿ ಶಿಸ್ತು ಕಾಪಾಡಲು ಅತ್ಯಗತ್ಯವಾಗಿತ್ತು ಎಂಬುದು ಆಡಳಿತವರ್ಗದ ಅಭಿಪ್ರಾಯ ಎಂದು ವರದಿಯಾಗಿದೆ.

ಸ್ಥಳ ತನಿಖೆಯನ್ನು ಸಹಾಯಕ ನಿರ್ದೇಶಕರು, ಕೋಲಾರ, ಇವರು ನಡೆಸಿದ ಸಂದರ್ಭದಲ್ಲಿ ವಿದ್ಯಾರ್ಥಿ ನಿಯಲದಲ್ಲಿರತಕ್ಕಂಥ ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ನೀಡಿದ ಒಮ್ಮತ ಅಭಿಪ್ರಾಯ ಏನೆಂದರೆ, ಚಂದ್ರ ಹಾಗೂ ಇತರ ಮೂವರು ಬಹಳ ಕಿಡಿಗೇಡಿತನ ಮತ್ತು ತುಂಟಾಟದ ಸ್ವಭಾವದವರಾಗಿರುತ್ತಾರೆ. ಮಕ್ಕಳಲ್ಲಿ ಶಿಸ್ತು ಮೂಡಿಸಲು ತಿಳುವಳಿಕೆ ಹಾಗೂ ಲಘುದಂಡನೆ ನೀಡುವುದು ಅಗತ್ಯವೆಂಬುದು ಅವರ ಅಭಿಪ್ರಾಯವೂ ಸಹಾ ಆಗಿದೆಯೆಂದು ತಿಳಿಸಿರುತ್ತಾರೆ. ಈಗ ಹಾಲಿ ಚಂದ್ರ ಮತ್ತು ಇತರ ಮೂವರು ಮಕ್ಕಳು ವಿದ್ಯಾರ್ಥಿ ನಿಲಯದಲ್ಲಿಯೇ ತಂಗಿದ್ದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿತ್ತಿದ್ದಾರೆ.

ಈ ವಿದ್ಯಾರ್ಥಿನಿಲಯದ ಅಧೀಕ್ಷಕರಾದ ಶ್ರೀಮತಿ ಶಶಿಕಲಾ ಇವರು ಮಕ್ಕಳಿಗೆ ಸಹಿಸಲಾಗದಷ್ಟು ಕಿರುಕುಳ ನೀಡುತ್ತಿದ್ದಾರೆ ಎಂಬುದು ಸತ್ಯಕ್ಕೆ ದೂರವಾಗಿರುತ್ತದೆಂದು ಮತ್ತು ಶಾಲೆಯಲ್ಲಿ ಶಾಂತಿಭಂಗವಾಗುವ ಯಾವ ಘಟನೆಗಳೂ ನಡೆದಿರುವುದಿಲ್ಲವೆಂದು ತಿಳಿದು ಬಂದಿದೆ. ಚಂದ್ರ ಮತ್ತು ಇತರ ಮೂವರ ಮಕ್ಕಳ ತಂದೆತಾಯಿಗಳೂ ಕೂಡ ಸ್ಥಳ ತನಿಖೆ ಸಮಯದಲ್ಲಿ ಹಾಜರಿದ್ದು ಶ್ರೀಮತಿ ಶಶಿಕಲಾ ಇವರು ಮಕ್ಕಳಿಗೆ ಸಹಿಸಲಾರದಷ್ಟು ಕಿರುಕುಳ ನೀಡಿಲ್ಲವೆಂದು ಹೇಳಿಕೆಯನ್ನು ನೀಡಿದ್ದಾರೆ.

ಶ್ರೀ. ಜಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಇದು ತಮ್ಮ ಇಲಾಖೆಗೆ ಸಂಬಂಧಪಟ್ಟ ಮತ್ತು ನಮ್ಮ ಇಲಾಖೆಯಿಂದ ಪರವಾನಿಗೆ ತೆಗೆದುಕೊಂಡಿಲ್ಲ ಎಂದು ಸನ್ಮಾನ್ಯ ಸಚಿವೆಯರು ಹೇಳುತ್ತಿದ್ದಾರೆ. ಅದು ಇರಬಹುದು. ನಾನು ಇಲ್ಲ ಎಂದು ಹೇಳುತ್ತಿಲ್ಲ. ಮತ್ತೆ ಸರ್ಕಾರ ಯಾವುದೇ ಅನುದಾನವನ್ನು ಕೊಡುತ್ತಿಲ್ಲ ಎಂದು ಕೂಡ ಹೇಳಿದ್ದಾರೆ. ಅದೊಂದು ಸೊಸೈಟಿ ನಡೆಸುತ್ತಿರುವುದು ಎಂದು ಹೇಳಿ ಹೇಳಿದ್ದಾರೆ. ಆದರೆ ಈ ಹೇಳಿಕೆಯನ್ನು ಸಂಪೂರ್ಣವಾಗಿ ಮಾನ್ಯ ಮಂತ್ರಿಗಳು ನಂಬುತ್ತಾರೆ ಎಂದರೆ ಅದನ್ನು ನಾನು ಖಂಡಿತಾ ಒಪ್ಪಲಿಕ್ಕೆ ತಯಾರಿಲ್ಲ. ಏಕೆಂದರೆ ಕಳೆದ ಒಂದು ತಿಂಗಳ ಹಿಂದೆ ಕೆಜಿಎಫ್‌ನಲ್ಲಿ ಇದೇ ರೀತಿಯಲ್ಲಿ ಸರ್ಕಾರ ನಡೆಸುತ್ತಿರುವ ಒಂದು ಶಾಲೆ ಇದೆ.

ಉಪಾಧ್ಯಕ್ಷರು :- ಇದನ್ನು ಚರ್ಚೆ ಮಾಡುವುದೇ? ಅವರು ಅಲ್ಲಿನ ವಾಸ್ತವಾಂಶವನ್ನು ಹೇಳಿದ್ದಾರೆ.

ಶ್ರೀ. ಜಿ. ವಿ. ಶ್ರೀರಾಮರೆಡ್ಡಿ :- ಅವರು ಹೇಳಿದ್ದೇ ವಾಸ್ತವಾಂಶ ಎಂದು ನಂಬಬೇಕು ಎಂದು ಹೇಳುತ್ತೀರೋ ಹೇಗೆ? ಮಾನ್ಯ ಉಪಾಧ್ಯಕ್ಷರೇ, ತಾವು ದಯವಿಟ್ಟು ಹೇಳಿ. ಅವರು ಹೇಳಿದ್ದೇ ಸತ್ಯವೇ? ನಮಗೆ ಕೆಲವು ಅನುಮಾನಗಳು ಇವೆ. ನಾವು ಕ್ಲಾರಿಫೀಕೇಷನ್ ಕೇಳುತ್ತೇವೆ. ಅದಕ್ಕೆ ಅವರು ಅದು ಖಾಸಗಿಯದು ಎಂದು ಬೇರೆ ಹೇಳುತ್ತಿದ್ದಾರೆ. ನಮಗೆ ಸಂಬಂಧವೇ ಇಲ್ಲ ಎಂದು ಹೇಳುತ್ತಿದ್ದಾರೆ. ನಮಗೆ ಕೆಲವು ಅನುಮಾನಗಳು ಇವೆ ಅದರಲ್ಲಿ ಅದನ್ನು ಕೇಳುತ್ತಿದ್ದೇವೆ. ಇದು ಚರ್ಚೆಯ ಪ್ರಶ್ನೆಯಲ್ಲ. ಪ್ರಶ್ನೆ ಇರುವುದು ಏನೆಂದರೆ ಅವರ ತಂದೆತಾಯಿಗಳು ಹೇಳಿಕೆಯನ್ನು ಕೊಟ್ಟು ಬಿಟ್ಟಿದ್ದಾರೆ. ಅವರು ತುಂಟರು, ಪುಂಡರು, ಕಿಡಿಗೇಡಿಗಳು ಎಂದು ಹೇಳಿ. ಅದು ಅಂಧ ಮಕ್ಕಳದು ಮತ್ತು ಕಿವುಡರ ಶಾಲೆ. ಆ ಅಂಧ ಮಕ್ಕಳು ಮತ್ತು ಕಿವುಡರು ಅಲ್ಲಿ ಕಿಡಿಗೇಡಿತನ ಮಾಡಲಿಕ್ಕೆ ಸಾಧ್ಯತೇ ಇದೆಯೇ ಎಂದು ನಾವೆಲ್ಲರೂ ಕೂಡ ಗಂಭೀರವಾಗಿ ಆಲೋಚನೆ ಮಾಡಬೇಕಾಗಿರತಕ್ಕಂಥದ್ದು. ಅದು ಅಂಧ ಮಕ್ಕಳ ಶಾಲೆ. ಕಿವುಡರು ಇದ್ದಾರೆ. ಅಂಧ ಮಕ್ಕಳು ಅಲ್ಲಿ ಕಿಡಿಗೇಡಿತನ ಮಾಡಿ ಪಾಠ ಮಾಡುತ್ತಿರುವ ಶಿಕ್ಷಕಿಯರನ್ನು ಹೊಡೆಯಲಿಕ್ಕೆ ಹೋದರು ಎಂದು ಹೇಳತಕ್ಕಂಥದ್ದು ನಾವೆಲ್ಲಾ ನಂಬಬೇಕು ಎಂದು ನೀವು ಹೇಳಿದರೆ ನಾನಂತೂ ನಂಬಲಿಕ್ಕೆ ಸಾಧ್ಯವಿಲ್ಲ. ಅವರ ಪರಿಸ್ಥಿತಿ ಅವರ ಭೌತಿಕವಾದಂಥ ಪರಿಸ್ಥಿತಿಯಲ್ಲಿ ಕಣ್ಣಿಲ್ಲದೇ ಇರುವ ಕುರುಡರು, ಕುಂಟರು, ಕಿವುಡರು ಅವರೆಲ್ಲಾ ಸೇರಿ ಅವರ ಶಿಕ್ಷಕಿಯನ್ನು ಹೊಡೆಯಲಿಕ್ಕೆ ಹೋಗುತ್ತಾರೆ ಎಂದು ಹೇಳಿದರೆ ಹೇಗೆ? ಬಹುಶಃ ಬೇರೆ ಏನಾದರೂ ಅಲ್ಲಿ ನಡೆದಿರಬಹುದು. ಅವರ ಅಂಗವಿಕಲತೆಯನ್ನು ದಯವಿಟ್ಟು ದುರುಪಯೋಗ ಮಾಡಿಕೊಂಡು ಅವರು ನಮ್ಮನ್ನು ಹೊಡೆಯಲಿಕ್ಕೆ ಬಂದರು ಎಂದು ಹೇಳತಕ್ಕಂಥದ್ದು ಇದನ್ನು ನಾವು ಮಾನಸಿಕವಾಗಿ ಒಪ್ಪಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ನೋಡಿದರೆ ಅವರು ಕೊಟ್ಟಿರುವ ಮಾಹಿತಿ ಏನು ಇದೆ, ಅದು ಸರಿಯಿಲ್ಲ ಎಂದು ನನ್ನ ಅನಿಸಿಕೆಯಾಗುತ್ತಿದೆ.

ಆ ವಿದ್ಯಾಸಂಸ್ಥೆಯ ಬಗ್ಗೆ ಖಾಸಗಿಯವರು ಎಂದು ತಾವು ಹೇಳಿದಿರಿ ನಿಜ. ಅದು ಇರಬಹುದು. ಆದರೆ ಆ ವಿದ್ಯಾಸಂಸ್ಥೆಯನ್ನು ನಡೆಸುತ್ತಿರುವ ಜನ, ಅದರ ಅಧಿಕಾರಿವರ್ಗದ ಮೇಲೆ ಬೇರೆ ಬೇರೆ ಹಲವಾರು ಆಪಾದನೆಗಳಿವೆ. ನಾನು ಇದನ್ನು ಇಲ್ಲಿ ಪ್ರಸ್ತಾಪಮಾಡಿತ್ತಿಲ್ಲ. ಏಕೆಂದರೆ ಅದು ಪ್ರಸ್ತುತವಲ್ಲ. ಹಲವಾರು ಆಪಾದನೆಗಳಿವೆ. ನಾನು ಇದನ್ನು ಇಲ್ಲಿ ಪ್ರಸ್ತಾಪಮಾಡುತ್ತಿಲ್ಲ. ಏಕೆಂದರೆ ಅದು ಪ್ರಸ್ತುತವಲ್ಲ. ಹಲವಾರು ಆಪಾದನೆಗಳಿವೆ ಅವರ ಮೇಲೆ. ಅದೆಲ್ಲವನ್ನೂ ಗಮನಿಸಿದರೆ ನಿಮಗೆ ಕೊಟ್ಟಿರುವ ಈ ವರದಿ ಏನಿದೆ, ಅದು ಸರಿಯಾಗಿಲ್ಲ. ಆದುದರಿಂದ ದಯವಿಟ್ಟು ನೀವು ಇನ್ನೂ ಸ್ವಲ್ಪ ಅಲ್ಲಿರುವ ನಮ್ಮ ಸಂಬಂಧಪಟ್ಟ ಶಾಸಕರು ಇದ್ದಾರೆ, ಮತ್ತು ಕೋಲಾರ ಶಾಸಕರು ಮಾನ್ಯ ಶ್ರೀನಿವಾಸಗೌಡರು ಇದ್ದಾರೆ. ಅವರಿಗೆ ಸ್ವಲ್ಪ ಜವಾಬ್ದಾರಿ ಕೊಟ್ಟು ತನಿಖೆ ಮಾಡಲಿಕ್ಕೆ ಹೇಳಿ ಸರ್ಕಾರಕ್ಕೆ ವರದಿಯನ್ನು ತರಿಸಿಕೊಂಡರೆ ನಿಜಾಂಶ ಏನು ಗೊತ್ತಾಗುತ್ತದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀಮತಿ ಬಿ. ಟಿ. ಲಲಿತಾನಾಯಕ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯರು) : - ನೀವು ಹೇಳಿರುವುದನ್ನು ಪರಿಶೀಲಿಸಿ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶಾಸನಾತ್ಮಕ ನಿರ್ಣಯ

ಶ್ರೀ. ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, "ಈ ಸದನವು ಸಂಸತ್ತು ನಗರ ಭೂ (ಪರಮಾವಧಿ ಮತ್ತು ವಿನಿಯಮನ) ಅಧಿನಿಯಮ, 1976 ನ್ನು ತಿದ್ದುಪಡಿ ಮಾಡಬೇಕೆಂಬ" ನಿರ್ಣಯವನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಹೀಗಿದೆ " ಸಂಸತ್ತು ನಗರ ಭೂ (ಪರಮಾವಧಿ ಮತ್ತು ವಿನಿಯಮನ) ಅಧಿನಿಯಮ, 1976 ನ್ನು ತಿದ್ದುಪಡಿ ಮಾಡಬೇಕೆಂಬ" ನಿರ್ಣಯವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ನಿರ್ಣಯಕ್ಕೆ ಅನುಮೋದನೆ ದೊರಕಿತು.

ಶ್ರೀ. ಜಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಉಪಮುಖ್ಯಮಂತ್ರಿಗಳು ಬರಲಿಲ್ಲ. ವಿದ್ಯುಚ್ಛಕ್ತಿ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆ ಎಂದು ಹೇಳಿದ್ದರು.

ಉಪಾಧ್ಯಕ್ಷರು :- ಈಗ ಈ ಸದನವು ಮುಂದುವರೆದು ಮತ್ತೆ 3 ಗಂಟೆಗೆ ಸೇರುತ್ತದೆ. ಆಮೇಲೆ ನೋಡೋಣ.

(ಸಭೆಯು 11-48 ಕ್ಕೆ ಮುಕ್ತಾಯಗೊಂಡು ಮತ್ತೆ ಸಭೆಯು 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸಭೆಯು 4-00 ನಿಮಿಷಕ್ಕೆ ಸಮಾವೇಶಗೊಂಡಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್ ರವರು) ವಹಿಸಿದ್ದರು)